# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 129 |
| ಸದಸ್ಯರ ಹೆಸರು | : | ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 13-12-2021. |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಶ್ರೀ ಎಸ್.ಎಲ್.ಬೈರಪ್ಪನವರ ಪರ್ವ ಕಾದಂಬರಿ ಆಧಾರಿತ ನಾಟಕವನ್ನು ರಾಜ್ಯದಲ್ಲಿ ಎಷ್ಟು ಕಡೆ ಪ್ರದರ್ಶನ ಮಾಡಲಾಗಿದೆ; ಮತ್ತು ಮಾಡಲು ಉದ್ದೇಶಿಸಲಾಗಿದೆ; (ವಿವರಗಳ ಜೊತೆಗೆ ಸದರಿ ನಾಟಕ ಪ್ರದರ್ಶನದ ನಿರ್ದೇಶಕರ/ ನಿರ್ಮಾಣದ ವಿವರ ನೀಡುವುದು) | • ಶ್ರೀ ಎಸ್.ಎಲ್.ಭೈರಪ್ಪನವರ 'ಪರ್ವ' ಕಾದಂಬರಿ ಆಧಾರಿತ ನಾಟಕವನ್ನು ರಾಜ್ಯದಲ್ಲಿ 21 ಕಡೆ ಪ್ರದರ್ಶನ ಮಾಡಲಾಗಿದೆ. (ಅನುಬಂಧ)<br>• **ನಿರ್ಮಾಣ**:ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ರಂಗಾಯಣದ ನಿರ್ದೇಶಕರು ಶ್ರೀ ಅಡ್ಡಂಡ ಸಿ.ಕಾರ್ಯಪ್ಪ.<br>• **ನಿರ್ದೇಶನ**: ಶ್ರೀ ಪ್ರಕಾಶ್ ಬೆಳವಾಡಿ, ಬೆಂಗಳೂರು.<br>• ರಾಜ್ಯದ ರಂಗಮಂದಿರಗಳು ಇರುವ ಜಿಲ್ಲೆಗಳಲ್ಲಿ ಒಟ್ಟು 20 ಪ್ರದರ್ಶನ ಹಾಗೂ ರಾಷ್ಟ್ರದ ದೆಹಲಿ, ವಾರಣಾಸಿ, ಭೂಪಾಲ್, ಮುಂಬೈ ಮತ್ತು ಮಣಿಪುರ ಈ ಐದು ರಾಜ್ಯಗಳಲ್ಲಿ ತಲಾ 1 ಪ್ರದರ್ಶನದಂತೆ ಒಟ್ಟು 5 ಪ್ರದರ್ಶನ ಏರ್ಪಡಿಸಲು ಉದ್ದೇಶಿಸಲಾಗಿದೆ. |
| (ಆ) | ಪರ್ವ ಕಾದಂಬರಿ ಆಧಾರಿತ ಪುಸ್ತಕದಲ್ಲಿ ಪ್ರಸ್ತಾಪಿಸಿರುವ ಸನಾತನ ಆಹಾರ ಪದ್ಧತಿಯನ್ನು ಸಾರ್ವಜನಿಕ ನಾಟಕ ಪ್ರದರ್ಶನದಲ್ಲಿ ಅಳವಡಿಸಿಕೊಳ್ಳಲಾಗಿದೆಯೇ: (ವಿವರ ನೀಡುವುದು) | ಕಾದಂಬರಿಯಲ್ಲಿ ರಂಗಪಠ್ಯಕ್ಕೆ ಅಗತ್ಯವಾದ ಭಾಗಗಳನ್ನು ಮಾತ್ರ ಸಂಭಾಷಣೆಯಾಗಿ ಬಳಸಿಕೊಳ್ಳಲಾಗುತ್ತದೆ. ಪ್ರಸ್ತುತ ಪರ್ವ ನಾಟಕದ ನಿರ್ದೇಶಕರು ರಂಗಪಠ್ಯವಾಗಿ ರೂಪಿಸಿದ ಸಂಭಾಷಣೆಗಳನ್ನು ಮಾತ್ರ ಪದರ್ಶನದಲ್ಲಿ ಬಳಸಿಕೊಳ್ಳಲಾಗಿದೆ. |
| (ಇ) | ರಾಜ್ಯದ ಇತರೆ ಖ್ಯಾತ ಸಾಹಿತಿಗಳ/ ನಾಟಕಕಾರರ ಕೃತಿಗಳನ್ನು ಸಾರ್ವಜನಿಕ ಪ್ರದರ್ಶನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆಯೇ? (ವಿವರ ನೀಡುವುದು) | • ಹೌದು.<br>• ಈ ಹಿಂದೆಯೂ ಅನೇಕ ಲೇಖಕರ ಕಥೆ, ಕವಿತೆ, ಕಾದಂಬರಿ ಮತ್ತು ಮಹಾಕಾವ್ಯಗಳನ್ನು ರಂಗಪಠ್ಯವಾಗಿ ರೂಪಾಂತರಿಸಿ ನಾಟಕಗಳನ್ನು ಪ್ರದರ್ಶಿಸಲಾಗಿದೆ.<br>• ಉದಾ: ಡಾ. ಶಿವರಾಂ ಕಾರಂತರ 'ಸರಸಮ್ಮನ ಸಮಾಧಿ'<br>• ಕುವೆಂಪು ಅವರ 'ಕಿಂದರಜೋಗಿ', ಮಲೆಗಳಲ್ಲಿ ಮದುಮಗಳು' ಮತ್ತು 'ಶ್ರೀ ರಾಮಾಯಣ ದರ್ಶನಂ'<br>• ರವೀಂದ್ರನಾಥ್ ಟಾಗೋರ್ ರವರ 'ಗೋರ'<br>• ಯಶವಂತ ಚಿತ್ತಾಲರ 'ಶಿಕಾರಿ'<br>• ಪೂರ್ಣಚಂದ್ರ ತೇಜಸ್ವಿ ಅವರ 'ಕೃಷ್ಣೇಗೌಡನ ಆನೆ'<br>• ದೇವನೂರು ಮಹದೇವ ಅವರ 'ಕುಸುಮಬಾಲೆ' ಮುಂತಾದ ಅನೇಕ ಕೃತಿಗಳನ್ನು ನಾಟಕವನ್ನಾಗಿಸಿ ಪ್ರದರ್ಶಿಸಲಾಗಿದೆ.<br>• ಪ್ರಸ್ತುತ ಮಾಸ್ತಿಯವರ 'ಮೂಕನ ಮಕ್ಕಳು' ಕಥನ ಕಾವ್ಯವನ್ನು ನಾಟಕ ಮಾಡಿ ಪ್ರದರ್ಶಿಸಲಾಗುತ್ತಿದೆ. |

ಸಂಖ್ಯೆ: ಕಸಂವಾ 76 ಕವಿಸ 2021

(ವಿ. ಸುನಿಲ್ ಕುಮಾರ್)

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ

**ಮೈಸೂರು ರಂಗಾಯಣ ಸಿದ್ಧಪಡಿಸಿದ 'ಪರ್ವ' ಮಹಾ ರಂಗಪ್ರಯೋಗದ ಈವರೆಗಿನ ಪ್ರದರ್ಶನದ ವಿವರಗಳು**

| ಕ್ರ.ಸಂ. | ದಿನಾಂಕ | ಪ್ರದರ್ಶನ ನಡೆದ ಸ್ಥಳ |
|---|---|---|
| 1 | 12.03.2021 | ಕಲಾಮಂದಿರ, ಮೈಸೂರು |
| 2 | 13.03.2021 | ಕಲಾಮಂದಿರ, ಮೈಸೂರು |
| 3 | 14.03.2021 | ಕಲಾಮಂದಿರ, ಮೈಸೂರು |
| 4 | 25.03.2021 | ಭೂಮಿಗೀತ, ರಂಗಾಯಣ, ಮೈಸೂರು. |
| 5 | 26.03.2021 | ಭೂಮಿಗೀತ, ರಂಗಾಯಣ, ಮೈಸೂರು. |
| 6 | 27.03.2021 | ಭೂಮಿಗೀತ, ರಂಗಾಯಣ, ಮೈಸೂರು. |
| 7 | 28.03.2021 | ಭೂಮಿಗೀತ, ರಂಗಾಯಣ, ಮೈಸೂರು. |
| 8 | 03.04.2021 | ಭೂಮಿಗೀತ, ರಂಗಾಯಣ, ಮೈಸೂರು. |
| 9 | 04.04.2021 | ಭೂಮಿಗೀತ, ರಂಗಾಯಣ, ಮೈಸೂರು. |
| 10 | 04.09.2021 | ಭೂಮಿಗೀತ, ರಂಗಾಯಣ, ಮೈಸೂರು. |
| 11 | 05.09.2021 | ಭೂಮಿಗೀತ, ರಂಗಾಯಣ, ಮೈಸೂರು. |
| 12 | 11.09.2021 | ಭೂಮಿಗೀತ, ರಂಗಾಯಣ, ಮೈಸೂರು. |
| 13 | 12.09.2021 | ಭೂಮಿಗೀತ, ರಂಗಾಯಣ, ಮೈಸೂರು. |
| 14 | 25.09.2021 | ಭೂಮಿಗೀತ, ರಂಗಾಯಣ, ಮೈಸೂರು. |
| 15 | 02.10.2021 | ಭೂಮಿಗೀತ, ರಂಗಾಯಣ, ಮೈಸೂರು. |
| 16 | 03.10.2021 | ಭೂಮಿಗೀತ, ರಂಗಾಯಣ, ಮೈಸೂರು. |
| 17 | 09.10.2021 | ಭೂಮಿಗೀತ, ರಂಗಾಯಣ, ಮೈಸೂರು. |
| 18 | 10.10.2021 | ಭೂಮಿಗೀತ, ರಂಗಾಯಣ, ಮೈಸೂರು. |
| 19 | 23.10.2021 | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು. |
| 20 | 24.10.2021 | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು. |
| 21 | 28.11.2021 | ಭೂಮಿಗೀತ, ರಂಗಾಯಣ, ಮೈಸೂರು. |